# ಮಂಗಳೂರು: ಗೋದ್ರೆಜ್ ಅಲ್‌ಫೈನ್‌ಗೆ ಚಾಲನೆ



ಮಂಗಳೂರು, ಫೆ.7: ದೇಶದ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಗಳಲ್ಲಿ ಒಂದಾದ ಗೋದ್ರೆಜ್ ಪ್ರಾಪರ್ಟೀಸ್ ಲಿ. ನಗರದ ಯೆಯ್ಯಾಡಿಯಲ್ಲಿ ಫಿರ್ಝಾ ಗ್ರೂಪ್ ಸಹಯೋಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ 'ಗೋದ್ರೆಜ್ ಅಲ್‌ಫೈನ್' ಅತ್ಯಾಧುನಿಕ ವಸತಿ ಯೋಜನೆಗೆ ಗೋದ್ರೆಜ್ ಪ್ರಾಪರ್ಟೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಫಿರೋಝ್ ಷಾ ಗೋದ್ರೆಜ್ ಮಂಗಳವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು '1990ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಹಲವು ಬೃಹತ್ ಯೋಜನೆಗಳನ್ನು ರೂಪಿಸಿದ್ದು, ಪ್ರಸ್ತುತ ದೇಶದ 12 ನಗರಗಳಲ್ಲಿ ವಸತಿ ಸಮುಚ್ಚಯಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇದೀಗ ಮಂಗಳೂರು ನಗರದಲ್ಲಿ ಸಂಸ್ಥೆಯು ಪ್ರಥಮ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇಲ್ಲಿ ಗುಣಮಟ್ಟದ ವಸತಿ ಯೋಜನೆಗೆ ಪೂರಕ ಬೇಡಿಕೆ ಇರುವುದನ್ನು ಮನಗಂಡಿದ್ದು, ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಉತ್ತಮ ಸೌಲಭ್ಯ ಮತ್ತು ಪಾಲುದಾರರಿಗೆ ಲಾಭದಾಯಕ ಯೋಜನೆಗಳನ್ನು ಸಂಸ್ಥೆ ರೂಪಿಸುತ್ತಿದೆ ಎಂದರು.

ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ದೇಶದ ಮುಂಚೂಣಿ ಸಂಸ್ಥೆಗಳಲ್ಲೊಂದು ಎಂಬ ಖ್ಯಾತಿ ಪಡೆದಿರುವ ಪ್ರತಿಷ್ಠಿತ ಗೋದ್ರೆಜ್ ಸಮೂಹದ ಗೋದ್ರೆಜ್ ಪ್ರಾಪರ್ಟೀಸ್ ಸಂಸ್ಥೆಯು ಹಲವು ಪ್ರಶಸ್ತಿ ಪುರಸ್ಕಾರಗಳಿಗೂ ಪಾತ್ರವಾಗಿದೆ ಎಂದು ಫಿರೋಝ್ ಷಾ ಹೇಳಿದರು.

ಈ ನೂತನ ಯೋಜನೆ ನಿರ್ಮಾಣವಾಗಲಿರುವ ಭೂಮಿಯ ಮಾಲಕರಾದ ಫಿರ್ಝಾ ಗ್ರೂಪ್‌ನ ಆಡಳಿತ ನಿರ್ದೇಶಕ ಬಿ.ಎಂ.ಫಾರೂಕ್ ಮಾತನಾಡಿ, 'ಗೋದ್ರೆಜ್ ಪ್ರಾಪರ್ಟೀಸ್ ದೇಶದ ಉತ್ಕೃಷ್ಟ ರಿಯಲ್ ಎಸ್ಟೇಟ್ ವ್ಯವಹಾರಿತ ಸಂಸ್ಥೆಯಾಗಿದ್ದು, ಇದರ ಜತೆ ಒಪ್ಪಂದ ಮಾಡಿಕೊಳ್ಳುವುದು ತನ್ನ ಕನಸಾಗಿತ್ತು. ಅದೀಗ ನನಸಾಗು ತ್ತಿದೆ. ಮಧ್ಯಮ ವರ್ಗದ ಜನರಿಗೆ ಕೈಗೆಟಕುವ ದರದಲ್ಲಿ ಇದರ ಪ್ರಯೋಜನ ಪಡೆಯುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

ದೇಶದ ಉದ್ಯಮರಂಗದ ದಿಗ್ಗಜರಲ್ಲಿ ಒಬ್ಬರಾದ ಆದಿ ಗೋದ್ರೆಜ್‌ರ ಪುತ್ರ ಫಿರೋಝ್ ಷಾ ಗೋದ್ರೆಜ್‌ರ ಸಮರ್ಥ ಯುವ ನಾಯಕತ್ವದಲ್ಲಿ ಗೋದ್ರೆಜ್ ಪ್ರಾಪರ್ಟೀಸ್ ಮುನ್ನಡೆಯುತ್ತಿದೆ ಎಂದು ಅವರು ಹೇಳಿದರು. ವೇದಿಕೆಯಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಟಿ.ಜಿತೇಂದ್ರನ್, ದಕ್ಷಿಣ ವಲಯ ಉಪಾಧ್ಯಕ್ಷ ಶ್ರೀರಾಮ್ ಅಯ್ಯರ್, ಉದ್ಯಮಿ ಬಿ.ಎ.ಮೊೈದಿನ್ ಬಾವಾ ಉಪಸ್ಥಿತರಿದ್ದರು.

## ಗೋದ್ರೆಜ್ ಅಲ್‌ಫೈನ್: ಹಲವು ವೈಶಿಷ್ಟ್ಯಗಳ ಸಮುಚ್ಚಯ

ಮಂಗಳೂರು, ಫೆ.7: ನಗರದ ಯೆಯ್ಯಾಡಿಯಲ್ಲಿ ಫಿರ್ಝಾ ಗ್ರೂಪ್ ಸಹಯೋಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ 'ಗೋದ್ರೆಜ್ ಅಲ್‌ಫೈನ್' ವಸತಿ ಯೋಜನೆಯು ಮುಂದಿನ ಮೂರು ವರ್ಷಗಳೊಳಗೆ ನಿರ್ಮಾಣ ಪೂರ್ಣಗೊಂಡು ಗ್ರಾಹಕರ ಕೈ ಸೇರಲಿದೆ ಎಂದು ಗೋದ್ರೆಜ್ ಪ್ರಾಪರ್ಟೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಫಿರೋಝ್ ಷಾ ಗೋದ್ರೆಜ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಯೆಯ್ಯಾಡಿಯ 4.5 ಎಕ್ರೆ ಪ್ರದೇಶದಲ್ಲಿ ತಲೆ ಎತ್ತಲಿರುವ 'ಗೋದ್ರೆಜ್ ಅಲ್‌ಫೈನ್' ತಲಾ 19 ಮಹಡಿಗಳ ಮೂರು ಗೋಪುರಗಳನ್ನು ಹೊಂದಿವೆ. ಅದರಲ್ಲಿ 450 ಅಪಾರ್ಟ್‌ಮೆಂಟ್‌ಗಳಿರುತ್ತವೆ. ಗ್ರಾಹಕರು 2 ಮತ್ತು 2.5 ಹಾಗು 3 ಬೆಡ್‌ರೂಮ್‌ಗಳ ಅಪಾರ್ಟ್‌ಮೆಂಟ್‌ಗಳನ್ನು 1,203 ಚ.ಅ.ಯಿಂದ 1,695 ಚ.ಅ. ವಿಸ್ತೀರ್ಣದಲ್ಲಿ ಹಾಗೂ ಪೆಂಟ್‌ಹೌಸ್‌ಗಳನ್ನು 2,700 ಚ.ಅ.ಯಿಂದ 3,500 ಚ.ಅ. ವಿಸ್ತೀರ್ಣ ವ್ಯಾಪ್ತಿಯಲ್ಲಿ ಪಡೆಯಬಹುದು ಎಂದು ಫಿರೋಝ್ ಷಾ ಹೇಳಿದರು.

ಅಂತಾರಾಷ್ಟ್ರೀಯ ಮಟ್ಟದ ವಿನ್ಯಾಸ, ಆಧುನಿಕ ಸೌಕರ್ಯದೊಂದಿಗೆ ಎಲ್ಲ ರೀತಿಯ ಮನರಂಜನಾ ವ್ಯವಸ್ಥೆ ಮತ್ತು ಟೆನಿಸ್ ಕೋರ್ಟ್, ಬ್ಯಾಡ್ಮಿಂಟನ್ ಕೋರ್ಟ್, ಬಿಲಿಯರ್ಡ್ಸ್ ಕೊಠಡಿ, ಕೇರಂ ಮತ್ತು ಟೇಬಲ್ ಟೆನಿಸ್ ಕೊಠಡಿ ಹಾಗೂ ಸುಸಜ್ಜಿತ ಜಿಮ್ನಾಶಿಯಂ, ಹೆಲ್ತ್ ಕ್ಲಬ್, ಈಜುಕೊಳ, ಅತಿಥಿಗಳ ಸೇವಾ ಅಪಾರ್ಟ್‌ಮೆಂಟ್, ಶಿಶು ಪಾಲನಾ ಕೇಂದ್ರ, ಪಾರ್ಟಿ ಹಾಲ್ ಇತ್ಯಾದಿ ಸೌಲಭ್ಯಗಳನ್ನು ಗೋದ್ರೆಜ್ ಅಲ್‌ಫೈನ್ ಹೊಂದಿದೆ.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ನಿರ್ಮಾಣಗೊಳ್ಳಲಿರುವ ಗೋದ್ರೆಜ್ ಅಲ್‌ಫೈನ್ ಶೇ. 80ರಷ್ಟು ಮುಕ್ತ ಪ್ರದೇಶವನ್ನು ಹೊಂದಿರುತ್ತದೆ. ಪರಿಸರ ಸ್ನೇಹಿ ನಿರ್ಮಾಣಕ್ಕೆ ಇಲ್ಲಿ ವಿಶೇಷ ಆದ್ಯತೆ ನೀಡಲಾಗಿದೆ. ಪ್ರಖ್ಯಾತ ನಿರ್ಮಾಣ ಸಂಸ್ಥೆ ಲಾರ್ಸೆನ್ ಆ್ಯಂಡ್ ಟೂಬ್ರೊ (ಎಲ್&ಟಿ) ಕಂಪೆನಿಯು ಇದರ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಿದೆ ಎಂದು ಫಿರೋಝ್ ಷಾ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಫಿರ್ಝಾ ಗ್ರೂಪ್‌ನ ಆಡಳಿತ ನಿರ್ದೇಶಕ ಬಿ.ಎಂ.ಫಾರೂಕ್, ಗೋದ್ರೆಜ್ ಪ್ರಾಪರ್ಟೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಟಿ.ಜಿತೇಂದ್ರನ್, ದಕ್ಷಿಣ ವಲಯ ಉಪಾಧ್ಯಕ್ಷ ಶ್ರೀರಾಮ್ ಅಯ್ಯರ್, ಉದ್ಯಮಿ ಬಿ.ಎ.ಮೊೈದಿನ್ ಬಾವಾ ಉಪಸ್ಥಿತರಿದ್ದರು.